ಮುಂದೆ ನಿಂಗೆ ಹಸಿ ಮೀನ್ ಪಳದಿ ಮರ್ತು ಹೋಯ್ತೇನೋ' ಅಂದ. 'ಅರೆ, ರೋಹಿ! ನೀ ಅಲ್ಲಿಂವೆ? ಎಲ್ಲರನ್ನೂ ಮಿಸ್ ಮಾಡ್ಕೊಳ್ತಿದ್ದೇನೆ ಮಾರಾಯ. ನಾಡಿದ್ದು ಸಂಜೆ ಬತ್ತಿ. ಎಲ್ಲರೂ ಸಿಗುವಾ' ಅಂದ.

ಗುಲಾಬಿ ಹುಡುಗರಿಬ್ಬರಿಗೂ ಕೋಕಮ್ ಶರಬತ್ತು ಮಾಡಿಕೊಟ್ಟು 'ತಮ್ಮಾ, ಮೊನ್ನೆ ಮೀನ್‌ಪೇಟೆಲಿ ರೊಡ್ರಿಗ್ಸ್ ಮಾಸ್ತರ್ ಸಿಕ್ಕದ್ರ ಅಂಬೂದಾಯ್ತು... ಬ್ಯಾಡಾ ಪಂಚಾಯ್ತಿ ಮಾರಾಯಾ' ಎಂದು ಕತೆ ಶುರು ಮಾಡಿದಳು.

ಪ್ರತಿ ರವಿವಾರ ರೊಡ್ರಿಗ್ಸ್ ಸರ್ ಚರ್ಚಿನಿಂದ ನೇರವಾಗಿ ಬರುವುದು ಮೀನುಪೇಟೆಗೇ! ಇವಳು ಕುಳ್ಳುವಲ್ಲಿಗೂ ಬಂದು ಮಾತಾಡಿಸಿ, ಮುಟ್ಟಿಯಲ್ಲಿ ಏನಿದೆ ಎಂದು ಕಣ್ಣುಹಾಯಿಸಿ, ಅವರಿಗೆ ಬೇಕಾದ ಬಂಗ್ಡೆ, ಇಸ್ವಾಣದಂಥ ಮೀನಿದ್ದರೆ ಕೊಂಡುಕೊಳ್ಳುವುದು ಎಂದಿನ ರೂಢಿಯಾಗಿತ್ತು. ರೊಡ್ರಿಗ್ಸ್ ಸರ್ ಹತ್ರ ಗುಲಾಬಿ ಯಾವಾಗಲೂ ದರದಲ್ಲಿ ಚೌಕಾಶಿ ಮಾಡುತ್ತಿರಲಿಲ್ಲ. ಕೆಲವೊಮ್ಮೆ ತಾನು ಕೊಂಡ ದರದಲ್ಲೇ ಅವರಿಗೆ ಕೊಡುತ್ತಿದ್ದದ್ದೂ ಉಂಟು. ಮೊನ್ನೆ ರೊಡ್ರಿಗ್ಸ್ ಸರನ್ನು ಫಿಶ್ ಮಾರ್ಕೆಟ್ಟಿನ ಬಾಗಿಲಿನಲ್ಲೇ ಕಂಡಿದ್ದಳು. ಪುಣ್ಯಕ್ಕೆ ಅವಳ ಮೀನುಮುಟ್ಟಿಯಲ್ಲಿ ಒಂದೆರಡು ತಾಜಾ ಇಸ್ವಣ ಮತ್ತು ಪಾಂಫ್ರೆಟ್ ಕೂಡ ಇತ್ತು. ಅವರು ಮುಂದಿನ ಸಾಲಿನಲ್ಲಿ ಕೂತ ಮೀನುಗಾರ್ತಿಯರ ಜೊತೆ ಚೌಕಾಶಿ ನಡೆಸಿದ್ದರು. ಈ ಕಡೆ ಬರಲೂ ಇಲ್ಲ, ನೋಡಲೂ ಇಲ್ಲ! ಗುಲಾಬಿಗೆ ಮಗನ ಬಗ್ಗೆ ಒಂದೆರಡು ಮಾತು ಅವರಲ್ಲಿ ಹೇಳಿಕೊಳ್ಳುವುದಿತ್ತು. ಅರೆ, ಹೋಗೇಬಿಟ್ಟರಲ್ಲ ಎನ್ನುತ್ತಾ ಬದಿಗೆ ಕೂತ ಮಾದೇವಿಗೆ – 'ಬಂದೆ, ಮಾತ್ರ ಲಕ್ಷ ಇರಲೆ ಹಾಂ' ಅನ್ನುತ್ತಾ ಹೊರಗೆ ಬಂದಳು. ಸೈಕಲ್ ಮೋಟರ್ ಇನ್ನೇನು ಸ್ಟಾರ್ಟ್ ಮಾಡಬೇಕು, 'ಸರ್ ಸರ್' ಅನ್ನುತ್ತಾ 'ತಕ್ಕಣ್ಣೆ, ತಾಜಾ ಪಾಂಫ್ರೆಟ್ ಇದೆ. ನಿಮ್ಗೆ ತವಾ ಫ್ರೈ ಅಂದ್ರೆ ಭಾಳಾ ಇಷ್ಟ ಅಂತಿರ್ತಾನೆ ನಮ್ಮ ಹುಡುಗ. ನಾಲ್ಕು ತಾಜಾ ಕಾಯ್ ಶೆಟ್ಲಿನೂ ಇದೆ, ಚೀಲ ತೆಗೀರಿ' ಅಂದಳು. 'ಅರೆ, ಫಿಲ್ಮ್ ಸ್ಟಾರನ ಮದರ್ ಈಗ್ಲೂ ಮೀನು ಮಾರ್ತಿದ್ದಿಯೇನೆ?' ಎಂದರು.

ಗುಲಾಬಿಗೆ ಹೇಗೆ ಪ್ರತಿಕ್ರಿಯಿಸಬೇಕೋ ತಿಳಿಯದೇ ಸುಮ್ಮನೇ ನಕ್ಕಳು. ರೊಡ್ರಿಗ್ಸ್ ಸರ್ ಕೂಡ ಮಾತಿಲ್ಲದೇ ನಿಂತರು. ಗದ್ದಲದ ಮಾರ್ಕೆಟ್ ಜಾಗದಲ್ಲಿ ಇಬ್ಬರ ಮೌನವು ಅಸಂಗತವಾಗಿ ಕಾಣುತ್ತಿತ್ತು. 'ಸ್ಪೋರ್ಟ್ಸಿನಲ್ಲಿ ನಿನ್ನ ಮಗನನ್ನು ಇಡೀ ಇಂಡಿಯಾಕ್ಕೆ ಸ್ಟಾರ್ ಮಾಡಬೇಕು ಅಂತ ಡ್ರೀಮ್ ಇಟ್ಕೊಂಡಿದ್ದೆ. ಅಂಥ ಟ್ಯಾಲೆಂಟೂ ಇತ್ತು ಆ ಪೋರನಲ್ಲಿ. ಅಂವಗೆ ಸಿನಿಮಾ ಹುಚ್ಚು ಅಂತ ನಂಗೊತ್ತಿರಲಿಲ್ಲ. ಈ ಲವ್ವು ಗಿವ್ವು ಹಚ್ಕೊಂಡಿದಾನೆ ಅಂತ ಗೊತ್ತಾದಾಗ್ಲೆ ಕೈ ತಪ್ಪಿದಾ ಅನಿಸಿತ್ತು. ಈಗಂತೂ ನನ್ನ ಕನಸು ಮಣ್ಣಲ್ಲಿ ಬಿತ್ತು. ಒಂದ್ ನೆನಪಿಟ್ಕೋ, ಈ ಸಿನಿಮಾ ಜಗತ್ತು ಹೊರಗಿರುವವರಿಗೆ ಗ್ಲಾಮರಸ್ ಆಗಿ ಕಾಣಬಹುದು. ನಿನ್ನ ಮಗ ಬೈ ಗ್ರೇಸ್ ಆಫ್ ಗಾಡ್, ಸಕ್ಸೆಸ್ ಕೂಡ ಆಗಬಹುದು. ಆದರೆ ಒಂದ್ವೇಳೆ ಫೇಲ್ ಆದರೆ ಬರಗೆಟ್ಟು ಹೋಗ್ತಾನೆ, ಬರೆದಿಟ್ಕೊ' ಎಂದು ಸೈಕಲ್ ಮೋಟರ್ ಸ್ಟಾರ್ಟ್ ಮಾಡಿ – 'ನಿನ್ನ ಮೀನೂ ಬೇಡಾ, ನಿಮ್ಮ ಪಂಚಾಯ್ತಿನೂ ಬೇಡಾ' ಎನ್ನುತ್ತಾ ಹೊರಟೇಬಿಟ್ಟರು. ಗುಲಾಬಿ ದಕ್ಕಾಗಿ ನಿಂತಿದ್ದಳು. ಮೃದು ಸ್ವಭಾವದ ರೊಡ್ರಿಗ್ಸ್ ಮಾಸ್ತರನ್ನು ಇಷ್ಟು ಕಠೋರ ಅವತಾರದಲ್ಲಿ ಕಲ್ಪಿಸಿಕೊಳ್ಳುವುದೂ ಸಾಧ್ಯವಿರಲಿಲ್ಲ. ಅವಳಿಗೆ ಆಘಾತವೇ ಆದಂತಾಯಿತು. ಮತ್ತೆ ಮೀನು ಮಾರುವ ಮನಸಾಗಲಿ ಶಕ್ತಿಯಾಗಲಿ ಉಳಿದಿರಲಿಲ್ಲ. ಪಕ್ಕದಲ್ಲಿ ಮೀನು ಮಾರುತ್ತಿದ್ದ ಮಾದೇವಿಗೇ 'ಯಾಕೋ ತಲೆಶಿರ್ತ ಶುರುವಾಯ್ತೆ ತಂಗಿ, ಈ ಮೀನು ಮಾತ್ರ ಮಾರ್ಕಾಬಾ, ಆಗಾ?' ಎಂದು ಹೇಳಿ ಪೇಟೆಗೂ ಹೋಗದೇ ನೆಟ್ಟಗೆ ಮನೆಗೆ ಹೋಗಿ ಜೋರಾಗಿ ಅತ್ತಿದ್ದಳು. ನಗುಮುಖದ, ಸದಾ 'ಗಾಡ್ ಬ್ಲೆಸ್' ಎಂದು ಹೇಳಿಯೇ ಹೋಗುವ ರೊಡ್ರಿಗ್ಸ್ ಮಾಸ್ತರರ ಈ ಮುಖವನ್ನು ಅವಳೆಂದೂ ಕಂಡಿರಲಿಲ್ಲ. ಆ ಕತೆಯನ್ನೆಲ್ಲಾ ರೋಹಿತನಿಗೆ ಹೇಳುವಾಗ ಮತ್ತೆ ಗುಲಾಬಕ್ಕನ ಕಣ್ಣುಗಳು ಆರ್ದ್ರಗೊಂಡರೂ, ಮಕ್ಕಳ ಮುಂದೆ ಅಳಬಾರದು ಎಂದು ಒಳಹೋಗಿ ಮುಖ ತೊಳೆದು ಬಂದಳು.

'ಅಯ್ಯೋ ಗುಲಾಬಕ್ಕ, ರೊಡ್ರಿಗ್ಸ್ ಸರ್ ಈಗ ಒಂಥರಾ ಆಗಬಿಟ್ಟಾರೆ. ತಲಿಗೆ ಹಚ್ಚಕಾಬೆಡಾ, ಬಿಟ್ಟಾಕ... ಸ್ಪೋರ್ಟ್ಸಿನಲ್ಲಿ ಪ್ರೀತಂನಿಗೆ ಸಿಕ್ಕಾಪಟ್ಟೆ ಟ್ಯಾಲೆಂಟ್ ಇದೆ ಖರೆ. ನಾನೂ ಒಬ್ಬ ಸ್ಪೋರ್ಟ್ಸಮನ್ನನೇ. ಆದರೂ ನನ್ನ ಪ್ರಕಾರ ಪ್ರೀತಂ ಸಿನಿಮಾ ಅವಕಾಶ ಬಿಡೂಕಿಲ್ಲ. ಅದರಲ್ಲೂ ನಾಗತಿಹಳ್ಳಿಯವರಂಥ ಫೇಮಸ್ ಡೈರೆಕ್ಟರ್ ಸಿನಿಮಾದಲ್ಲಿ ಚಾನ್ಸ್ ಸಿಕ್ಕೂದಂದ್ರೆ ಆಟ ಅಲ್ಲ. ಫಸ್ಟು ಅವನು ಸಿನಿಮಾ ಟ್ರೈ ಮಾಡ್ಲೆ. ಕ್ಲಿಕ್ ಆಗಲಿಲ್ಲ ಅಂದ್ರೆ ಮುಂದಿನ ಲೈಫ್ ಬಗ್ಗೆ ಮತ್ತೆ ಯೋಚಿಸುವಾ' ಅಂದ ರೋಹಿತ. ಗುಲಾಬಿಗೂ ಸರಿಸುಮಾರು ಅದೇ ಭಾವನೆ ಮನಸಿಗೆ ಬಂದಿತ್ತು. ಉಡಾಳ ಹುಡುಗ ಅಂತ ಕಂಡರೂ ರೋಹಿತ್ ಇಷ್ಟು ಪ್ರಬುದ್ಧನಂತೆ ಸಲಹೆ ಕೊಟ್ಟದ್ದು ಅವಳ ಮನಸ್ಸು ನಿರುಮ್ಮಳ ಆಯ್ತು.

ನಂತರ ಮಾತು ಮತ್ತೆ ರೊಡ್ರಿಗ್ಸ್ ಸರ್ ಬಗ್ಗೆನೇ ಶುರುವಾಯ್ತು. ಅವರ ಮಗಳು ಯಾರನ್ನೋ ಲವ್ ಮಾಡಿ ಗೋವೆಗೆ ಹೋಗಿ ಮದುವೆಯಾದದ್ದು, ನಾಲ್ಕೇ ತಿಂಗಳಲ್ಲಿ ಆ ಪ್ರೀತಿ, ಮದುವೆ, ಮನಸು ಎಲ್ಲಾ ಮುರಿದು ಮೊನ್ನೆ ವಾಪಸ್ ಮನೆಗೆ ಬಂದದ್ದು, ಈ ಪ್ರಕರಣದಿಂದ ರೊಡ್ರಿಗ್ಸ್ ಸರ್ ಮನಸ್ಸಿಗೆ ಹಚ್ಚಿಕೊಂಡಿದ್ದು... ವಿಷಾದದ ಚರ್ಚೆಯಾಯಿತು.

ಮಾಲಾಗ್ರೌಂಡಿನಲ್ಲಿ ಪ್ರಾಕ್ಟೀಸು ಮಾಡುತ್ತಿದ್ದ ಮಕ್ಕಳಿಗೆಲ್ಲ 'ಗಾಡ್ ಬ್ಲೆಸ್' ಎನ್ನುತ್ತಾ ಎಲ್ಲರ ಒಳಿತು ಬಯಸುತ್ತಿದ್ದ ಅವರಿಗೆ ಹೀಗಾದದ್ದು ಎಲ್ಲರಿಗೂ ಬೇಸರದ ಸುದ್ದಿಯಾಗಿತ್ತು. ಇಡೀ ಕಾರವಾರಕ್ಕೇ ಇದು ಗೊತ್ತಾಗಿದ್ದರೂ ಗುಲಾಬಿಗೆ ವಿಷಯ ತಿಳಿದಿರಲಿಲ್ಲ. ತಂದೆಯಿಲ್ಲದ ಪ್ರೀತಂನಿಗೆ ತಂದೆ ಪ್ರೀತಿಯೆಂದರೇನು ಎನ್ನುವುದನ್ನು ಸ್ವಲ್ಪವಾದರೂ ಅವನ ಅನುಭವಕ್ಕೆ ತಂದವರಿದ್ದರೆ ಅದು ರೊಡ್ರಿಗ್ಸ್ ಮಾಸ್ತರು ಎನ್ನುವುದು ಅವಳ ಭಾವನೆಯಾಗಿತ್ತು. ಕೆಲವೊಮ್ಮೆ ತಾನೂ ಚಿಕ್ಕಪುಟ್ಟ ತಾಪತ್ರಯಗಳನ್ನು ಸಹಜವಾಗಿ ಅವರಲ್ಲಿ ಹೇಳಿಕೊಳ್ಳುವುದಿತ್ತು. ಅವರು ಮೌನದಲ್ಲಿ ತನ್ನ ಮಾತುಗಳನ್ನು ಬರೀ ಆಲಿಸಿದರೂ ಸಾಕು, ಮನಸು ಹಗುರಾಗುತ್ತಿತ್ತು. 'ತುಗೆಲ್ ಖಾತೆರ್ ದೆವಾ ಕಡೆನ್ ಬರೆ ಮಾಂಗತಾ' ಅಂತಿದ್ದರು. 'ನಿನಗಾಗಿ ದೇವರಲ್ಲಿ ಪ್ರಾರ್ಥನೆ ಮಾಡ್ತೇನೆ' ಎಂಬ ಅವರ ಮಾತುಗಳಲ್ಲಿ ಅದೇನೋ ಭರವಸೆ ಬರುತ್ತಿತ್ತು; ಅದೇನೋ ಹಿತ ಅನಿಸುತ್ತಿತ್ತು. ಕಳೆದ ಮೂರ್ನಾಲ್ಕು ವರ್ಷಗಳಿಂದಲೂ ಸಂಬಂಧಿಕರಲ್ಲದ, ಜಾತಿಯವರಲ್ಲದ, ಧರ್ಮದವರಲ್ಲದ ಅವರೊಡನೆ ಅಂಥ ಅಮೂರ್ತ ಮನುಷ್ಯ ಸಂಬಂಧವೊಂದು ಭಾವನಾತ್ಮಕವಾಗಿ ಅವಳನ್ನು ಪೊರೆದದ್ದು ನಿಜ. ಹೀಗಾಗಿಯೇ ಅಂದು ಮೀನು ಪೇಟೆಯಲ್ಲಿ ರೊಡ್ರಿಗ್ಸ್ ಮಾಸ್ತರ್ ಅವರ ಕಟು ಮತ್ತು ವ್ಯಂಗ್ಯದ ಮಾತುಗಳು ಮನಸಿಗೆ ಗಾಸಿ ಗೊಳಿಸುವುದಕ್ಕೆ ಕಾರಣವಾಗಿದ್ದವು. ಪ್ರೀತಂನ ಗೆಳೆಯರು ಹೇಳುವವರೆಗೂ ರೊಡ್ರಿಗ್ಸ್ ಮಾಸ್ತರ್ ಅವರ ಈ ಎಲ್ಲಾ ಕೌಟುಂಬಿಕ ಸಂಗತಿ ಗುಲಾಬಿಗೆ ತಿಳಿದಿರಲಿಲ್ಲ. ಬಹಳ ನೊಂದುಕೊಂಡಳು.

ಎಂದಿನಂತಲ್ಲದ ಅವರ ಅಂದಿನ ಮಾತು ಮತ್ತು ವರ್ತನೆಗೆ ಅವರ ಈಗಿನ ಮನಸ್ಥಿತಿ ಮತ್ತು ಪ್ರೀತಂನಿಂದಾದ ನಿರಾಸೆ ಎರಡೂ ಕಾರಣ ಎನ್ನುವುದು ಸ್ಪಷ್ಟವಾದವು. ತಂದೆ ಸ್ಥಾನದಲ್ಲಿದ್ದ ರೊಡ್ರಿಗ್ಸ್ ಮಾಸ್ತರಿಗೆ ಒಂದು ಫೋನಾದರೂ ಮಾಡ್ಬೇಕಿತ್ತು ಈ ಪೋರಾ, ಎಂದು ಮಗನ ಮೇಲೆ ಮುನಿಸಿಕೊಂಡಳು. ಅಷ್ಟರಲ್ಲಿ ರೋಹಿತ್ ಫೋನ್ ಮಾಡಿ ಚಿತ್ರಾ, ನವೀನ್, ದೀಪಾಲಿ, ಚಿಂತನ್ ಎಲ್ಲರನ್ನೂ ಕರೆಸಿದ್ದ. ಪ್ರೀತಂನನ್ನು ಗ್ರ್ಯಾಂಡಾಗಿ ಸ್ವಾಗತಿಸುವುದರ ಬಗ್ಗೆ ಅವರೆಲ್ಲ ಚರ್ಚಿಸುತ್ತಿದ್ದದ್ದು ಗುಲಾಬಿಯ ಲಕ್ಷ್ಯಕ್ಕೆ ಬರಲಿಲ್ಲ.

ಮಕ್ಕಳೆಲ್ಲ ಗೌಜಿ ಹಾಕಿ ಹೋದ ಮೇಲೆ ಮತ್ತೆ ಒಂಟಿಯಾದಳು. ಒಳಗೆ ದೇವರ ಮುಂದೆ ಹಣತೆಯಲ್ಲಿ ದೀಪ ಹಚ್ಚಿದಳು. ರೊಡ್ರಿಗ್ಸ್ ಮಾಸ್ತರ್ ಅವರ ಮನಸ್ಸಿನ ನೆಮ್ಮದಿಗಾಗಿ ಪ್ರಾರ್ಥಿಸಿದಳು. 'ಅವರ ಕಷ್ಟಗಳನ್ನು ದೂರಮಾಡು ಕುಲದೈವಾ' ಎಂದು ಕೂರ್ಮಗಡದ ನರಸಿಂಹ ಸ್ವಾಮಿಯನ್ನು ಬೇಡಿಕೊಂಡಳು. 'ಜಾತ್ರೆದಿನ ಹೂವಿನ ಪೂಜೆ ನಡೆಸಿಕೊಡುವೆ ಸ್ವಾಮಿ', ಎಂದು ಹರಕೆಯನ್ನೂ ಹೊತ್ತಳು.

ನಾಗತಿಹಳ್ಳಿ ಸರ್ ಬೆಂಗಳೂರಿಗೆ ಮರಳಿದ ಬೆನ್ನಲ್ಲೇ ಪ್ರೀತಂನೂ ಊರಿಗೆ ವಾಪಾಸಾಗಲು ತಯಾರಾಗಿದ್ದ. ಶೈಲತ್ತೆ ಇನ್ನೆರಡು ದಿನ ಇದ್ದು ಹೋಗು ಎಂದು ವರಾತೆ ಹಚ್ಚಿದಳು. ಪ್ರೀತಂನಿಗೆ ಎರಡು ಮನಸ್ಸಾಯಿತು. ಗುಲ್ಬರ್ಗಾಕ್ಕೆ ಬರುವಾಗಿನ ಯೋಜನೆಗಳು ಮತ್ತು ಯೋಚನೆಗಳು ಇಲ್ಲಿಗೆ ಬಂದ ಮೇಲೆ ಬೇರೆಯದೇ ಸ್ವರೂಪ ತಾಳಿದ್ದವು ನಿಜ. ಆದರೆ ಕೊನೆಗೂ ಸುಮಿಯನ್ನು ಕಾಣುವಂತೆ ಆದದ್ದೇ ಅವನಿಗೆ ದೊಡ್ಡ ಸಮಾಧಾನ. ನಾಗತಿಹಳ್ಳಿ ಸರ್ ಲಿಂಗನಗೌಡ ಪಾಟೀಲರ ಮನಃಪರಿವರ್ತನೆಯ ಹಾದಿಗೆ ಬರುವಂತೆ ಮಾಡಿದ್ದು ದೊಡ್ಡ ಮಾತೇ!

(ಸಶೇಷ)